## ಪ್ರತಿ ಪ್ರಾಯೋಜಕರಿಗೆ ದೊರೆಯುವ ಸೌಲಭ್ಯಗಳು

10 ಅಡಿ x 10 ಅಡಿ ಅಳತೆಯ ಒಂದು ಹೈ–ಟೆಕ್ ಮಳಿಗೆ, ಪ್ರಾಯೋಜಕರ ಹೆಸರು/ ಸಂಸ್ಥೆಯ ಚಿನ್ಹೆಯನ್ನು ಸೂಕ್ತ ಜಾಗಗಳಲ್ಲಿ ಪ್ರದರ್ಶಸುವುದಲ್ಲದೆ, ಸಂಸ್ಥೆಯ ವಿಶೇಷ ಸ್ಮರಣ ಸಂಚಿಕೆಯಲ್ಲೂ ಪ್ರಕಟಿಸಲಾಗುವುದು.

**ಹಣ ಸಂದಾಯ:** ಭಾಗವಹಿಸುವವರು ನಿಗದಿತ ವಿವರಗಳೊಂದಿಗೆ, ಡಿಮ್ಯಾಂಡ್ ಡ್ರಾಫ್ಟ್ ಅನ್ನು Society for Promotion of Horticulture, ICAR-IIHR, Hesaraghatta, Bengaluru ಇವರ ಹೆಸರಲ್ಲಿ ಪಡೆದು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಬಹುದಾಗಿದೆ ಅಥವಾ ಹಣವನ್ನು ಆರ್ ಟಿ ಜಿ ಎಸ್/ನೆಫ್ಟ್ ಮೂಲಕ ಈ ಖಾತೆಗೆ ವರ್ಗಾಯಿಸಬಹುದಾಗಿದೆ.

| | | |
|---|---|---|
| ಫಲಾನುಭವಿಯ ಹೆಸರು | : | *Society for Promotion of Horticulture, ICAR-IIHR, Hesaraghatta, Bengaluru.* |
| ಬ್ಯಾಂಕ್ ಖಾತೆ ನಂ. | : | 1805606747 |
| ಎಂ ಐ ಸಿ ಆರ್ ನಂ. | : | 560016044 |
| ಐ ಎಫ್ ಎಸ್ ಸಿ ಕೋಡ್ | : | CBIN0283973 |
| ಬ್ಯಾಂಕ್ ವಿಳಾಸ | : | Central Bank of India, IIHR, Hesaraghatta Lake Post, Bengaluru - 560089 |

**ಸೂಚನೆ:** ಬೆಂಗಳೂರು ನಗರ ಹೊರತಾದ ಯಾವುದೇ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

## ತೋಟಗಾರಿಕಾ ಮೇಳ ನಡೆಯುವ ಸ್ಥಳ

ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು 'ಗಾರ್ಡನ್ ಸಿಟಿ' ಎಂದೇ ಖ್ಯಾತಿ ಪಡೆದಿದೆ. ದೇಶದ ಪ್ರಮುಖ ಶೈಕ್ಷಣಿಕ ಕೇಂದ್ರಗಳಲ್ಲಿ ಇದೂ ಒಂದಾಗಿದ್ದು ಆತಿಥ್ಯಕ್ಕೆ ಹೆಸರುವಾಸಿ. ನಗರದ ಸುತ್ತಮುತ್ತಲು ಪ್ರಖ್ಯಾತಿ ಹೊಂದಿದ ತೋಟಗಾರಿಕಾ ಸಸ್ಯಕ್ಷೇತ್ರಗಳಿದ್ದು, ಅತ್ಯುತ್ತಮ ಬೀಜ ಮತ್ತು ಗಿಡಗಳನ್ನು ಉತ್ಪಾದಿಸಲಾಗುತ್ತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ. ಕ್ಯಾಂಪಸ್ ಮತ್ತು ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ತೋಟಗಾರಿಕಾ ಮಹಾವಿದ್ಯಾಲಯ ಇಲ್ಲಿ ಕಾಣಬಹುದಾಗಿದೆ.

ಐ.ಸಿ.ಎ.ಆರ್ – ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್), ಹೆಸರಘಟ್ಟ, ಬೆಂಗಳೂರು ನಗರದಿಂದ 25 ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿ 263 ಹೆಕ್ಟೆರ್ ವಿಸ್ತೀರ್ಣದಲ್ಲಿ ಸಂಶೋಧನೆ ಹಾಗು ಪ್ರಾತ್ಯಕ್ಷಿಕೆಗಳನ್ನು ನಡೆಸಲಾಗುತ್ತಿದೆ. ತೋಟಗಾರಿಕಾ ಸಂಶೋಧನೆಗಾಗಿ ಈ ಸಂಸ್ಥೆ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಬೆಂಗಳೂರು ನಗರ ಮೆಟ್ರೋ–ಪಾಲಿಟನ್ ಸಾರಿಗೆ ಸಂಸ್ಥೆ ಬಸ್‌ಗಳ ಸಂಪರ್ಕ ಸೇವೆಯನ್ನು ಈ ಸಂಸ್ಥೆ ಹೊಂದಿದೆ.


**ಡಾ. ಎಂ.ಆರ್. ದಿನೇಶ್**

ನಿರ್ದೇಶಕರು, ಐ.ಸಿ.ಎ.ಆರ್ – ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್),
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560089 ಹಾಗೂ ಛೇರ್ಮನ್,
ತೋಟಗಾರಿಕಾ ಮೇಳದ ಆಯೋಜನಾ ಸಮಿತಿ, ದೂರವಾಣಿ : 080–23086100,
ಫ್ಯಾಕ್ಸ್ : 080–28466291, ಮಿಂಚಂಚೆ : director@iihr.res.in, ವೆಬ್ : http : // www.iihr.res.in


**ಇನ್ನೂ ಹೆಚ್ಚಿನ ಮಾಹಿತಿಗಾಗಿ ಹಾಗೂ ತೋಟಗಾರಿಕಾ ಮೇಳದಲ್ಲಿ ನೋಂದಾಯಿಸಲು ದಯವಿಟ್ಟು ಸಂಪರ್ಕಿಸಿ;**


**ಡಾ. ಆರ್. ವೆಂಕಟಕುಮಾರ್**

ಮುಖ್ಯಸ್ಥರು, ಸಾಮಾಜಿಕ ಶಾಸ್ತ್ರ ಮತ್ತು ತರಬೇತಿ ವಿಭಾಗ, ಐ.ಸಿ.ಎ.ಆರ್– ಐ.ಐ.ಎಚ್.ಆರ್,
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560089
ದೂರವಾಣಿ : 080-28446010, (M) 7760835475
ಮಿಂಚಂಚೆ : socialscience@iihr.res.in; venkat@iihr.res.in

**ಡಾ. ಬಿ. ನಾರಾಯಣಸ್ವಾಮಿ**

ಪ್ರಧಾನ ವಿಜ್ಞಾನಿ (ಕೃಷಿ ವಿಸ್ತರಣೆ) ಮತ್ತು ಮೇಳದ ಆಯೋಜನಾ ಕಾರ್ಯದರ್ಶಿ,
ಸಾಮಾಜಿಕ ಶಾಸ್ತ್ರ ಮತ್ತು ತರಬೇತಿ ವಿಭಾಗ, ಐ.ಸಿ.ಎ.ಆರ್– ಐ.ಐ.ಎಚ್.ಆರ್,
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560089
ದೂರವಾಣಿ : 080-28446010, 23086100, (M) 9480290345
ಮಿಂಚಂಚೆ : bnswamy2000@yahoo.com; socialscience@iihr.res.in


ರಾಷ್ಟ್ರೀಯ ತೋಟಗಾರಿಕಾ ಮೇಳ–2018










ಭಾ. ಕೃ. ಅನು. ಪ – ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು–560089
भा.कृ.अनु.प–भारतीय बागवानी अनुसंधान संस्थान
हेसरघट्टा लेक पोस्ट, बेंगलूरु – 560089
ICAR-Indian Institute of Horticultural Research
Hesaraghatta Lake Post, Bengaluru - 560089


# ರಾಷ್ಟ್ರೀಯ ತೋಟಗಾರಿಕಾ ಮೇಳ

ಗ್ರಾಮೀಣ ವಾಣಿಜ್ಯೋದ್ಯಮದ ಅಭಿವೃದ್ಧಿಗಾಗಿ ತೋಟಗಾರಿಕೆ

# राष्ट्रीय बागवानी मेला

ग्रामीण उद्यम को बढ़ावा देने के लिए बागवानी

# National Horticultural Fair

*Horticulture for Promoting Rural Entrepreneurship*

**March 15-17, 2018**

**ಸ್ಥಳ: ಐ.ಸಿ.ಎ.ಆರ್ – ಐ.ಐ.ಎಚ್.ಆರ್ ಆವರಣ, ಹೆಸರಘಟ್ಟ–560089**

**स्थान : भा.कृ.अनु.प. – भा.बा.अनु.सं., हेसरघट्टा, बेंगलूरु – 560089**

**Venue : ICAR-IIHR, Hesaraghatta, Bengaluru-560089**

## ರಾಷ್ಟ್ರೀಯ ತೋಟಗಾರಿಕಾ ಮೇಳ–2018

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್) ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯಕ್ಕೆ ಸಂಬಂಧಿಸಿದ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಅಡಿಯಲ್ಲಿ 1967ರಲ್ಲಿ ಸ್ಥಾಪಿತವಾಗಿದೆ. ಇದು ಬೆಂಗಳೂರು ಹೊರವಲಯದ ಹೆಸರಘಟ್ಟದಲ್ಲಿದೆ. ಕಳೆದ 2017 ರಲ್ಲಿ ತನ್ನ ಅತ್ಯಮೂಲ್ಯ 50 ವರ್ಷಗಳ ಸೇವೆಯ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿತು. ವಿವಿಧ ಹಣ್ಣಿನ ಬೆಳೆ, ತರಕಾರಿ ಬೆಳೆಗಳು, ಆಲಂಕಾರಿಕ ಹಾಗೂ ಔಷಧೀ ಬೆಳೆಗಳು ಮತ್ತು ಆಣಬೆಯಲ್ಲಿ ಸಮಗ್ರ ಸಂಶೋಧನೆಗಳನ್ನು ನಿರಂತರವಾಗಿ ಇಲ್ಲಿ ನಡೆಸಲಾಗುತ್ತಿದೆ. ಒಟ್ಟು 263 ಹೆಕ್ಟೇರ್ ವಿಸ್ತೀರ್ಣದಲ್ಲಿ ಸಂಶೋಧನೆಗಳ ಜೊತೆಗೆ ಪ್ರಧಾನ ಕಛೇರಿಯನ್ನು ಬೆಂಗಳೂರಿನಲ್ಲಿ ಹೊಂದಿದೆ. ಅಲ್ಲದೆ ತೋಟಗಾರಿಕೆಯ ಪ್ರಾದೇಶಿಕ ಪ್ರಾಯೋಗಿಕ ಕೇಂದ್ರಗಳನ್ನು ಓಡಿಶಾ ರಾಜ್ಯದ ಭುವನೇಶ್ವರ, ಕರ್ನಾಟಕ ರಾಜ್ಯದ ಚೆಟ್ಟಳ್ಳಿ (ಕೊಡಗು ಜಿಲ್ಲೆ) ಹಾಗು ಹಿರೇಹಳ್ಳಿ (ತುಮಕೂರು ಜಿಲ್ಲೆ)ಯಲ್ಲಿ ಹೊಂದಿದೆ. ಎರಡು ಕೃಷಿ ವಿಜ್ಞಾನ ಕೇಂದ್ರಗಳು ಐ.ಐ.ಎಚ್.ಆರ್ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವು ಕೊಡಗಿನ ಗೋಣಿಕೊಪ್ಪಲು ಮತ್ತು ತುಮಕೂರಿನ ಹಿರೇಹಳ್ಳಿಯಲ್ಲಿವೆ. ಮೇಲೆ ತಿಳಿಸಿದ ಎಲ್ಲಾ ತೋಟಗಾರಿಕಾ ಬೆಳೆಗಳಲ್ಲಿ ಸಂಶೋಧನಾ ತಂತ್ರಜ್ಞಾನಗಳಿಂದಾಗಿ ಭಾರತದ ಒಟ್ಟಾರೆ ತೋಟಗಾರಿಕಾ ಕ್ಷೇತ್ರದ ಅಭಿವೃದ್ಧಿಯಲ್ಲಿ ಐ.ಐ.ಎಚ್.ಆರ್ ಅಗ್ರಮಾನ್ಯ ಪಾತ್ರವಹಿಸಿದೆ. ಇಲ್ಲಿನ ಪ್ರಮುಖ ತಳಿಗಳು, ರೈತ ಸ್ನೇಹಿ ಲಾಭದಾಯಕ ತಂತ್ರಜ್ಞಾನಗಳು, ಪರಿಸರ ಪ್ರೇಮಿ ಹಾಗು ಬರಸಹಿಷ್ಣತೆಯ ಮಾರ್ಗ, ಕೊಯ್ಲೋತ್ತರ ಮತ್ತು ಮೌಲ್ಯವರ್ಧನೆಯ ತಂತ್ರಜ್ಞಾನಗಳು, ಮಣ್ಣು ವಿಜ್ಞಾನ ಹಾಗು ಪೋಷಕಾಂಶಗಳ ಮಿಶ್ರಣಗಳು, ದುಂಡಾಣುಗಳ ನಿಯಂತ್ರಣದ ಜೈವಿಕ ಕ್ರಮಗಳು, ಇತ್ಯಾದಿಗಳ ತಂತ್ರಜ್ಞಾನಗಳನ್ನು ಪ್ರತಿಯೊಬ್ಬರಿಗೂ ದೊರೆಯುವಂತೆ ವಾಣಿಜ್ಯೀಕರಣಗೊಳಿಸುವಲ್ಲಿ ತೋಟಗಾರಿಕಾ ತಂತ್ರಜ್ಞಾನಗಳ ವರ್ಗಾವಣೆಯ ಕೇಂದ್ರಬಿಂದುವಾಗಿದೆ. ಈ ಸಂಸ್ಥೆಯಲ್ಲಿನ ವ್ಯವಹಾರ ಯೋಜನೆ ಅಭಿವೃದ್ಧಿ ಘಟಕ (ಬಿ.ಪಿ.ಡಿ)ದ ವತಿಯಿಂದ ದೇಶದ ನಾನಾ ಭಾಗಗಳಿಗೆ ತಂತ್ರಜ್ಞಾನ ತಲುಪಿಸುವ ಒಡಂಬಡಿಕೆಯು ಹೆಚ್ಚು ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಕಾರಿಯಾಗಿದೆ. ಸಂಸ್ಥೆಯಲ್ಲಿನ ತರಬೇತಿಗಳು, ತಂತ್ರಜ್ಞಾನ ಅಳವಡಿಕೆಯಲ್ಲಿನ ಅಂತರ ಕಡಿಮೆಗೊಳಿಸುವಲ್ಲಿ ಸಂಸ್ಥೆ ಹಾಗು ಪ್ರಯೋಜನಾರ್ಥಿಗಳ ನಡುವೆ ಒಮ್ಮತ ಮೂಡಿಸುವ ಕ್ರಮ, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ (ಏಟಿಕ್)ದ ಪ್ರಕಟಣೆಗಳು, ಪರಿಕರಗಳ ಮಾರಾಟ, ತೋಟಗಾರಿಕಾ ಮಾಹಿತಿ ಒದಗಿಸುವ ತ್ವರಿತಗತಿಯ ಕ್ರಮಗಳು ಹೆಚ್ಚು ಮಹತ್ವ ಪಡೆದಿವೆ. ವಿಶೇಷವಾಗಿ 'ನನ್ನ ಗ್ರಾಮ – ನನ್ನ ಗೌರವ' (ಎಂಜಿಎಂಜಿ) ಯೋಜನೆಯಡಿಯಲ್ಲಿ ಒಟ್ಟು 125 ವಿಜ್ಞಾನಿಗಳ 25 ಗುಂಪುಗಳು, ದತ್ತು ಗ್ರಾಮಗಳಲ್ಲಿ ಮಣ್ಣು ಆರೋಗ್ಯ ಪತ್ರ ವಿತರಣೆಯೊಂದಿಗೆ ತಂತ್ರಜ್ಞಾನಗಳ ವರ್ಗಾವಣೆಯಲ್ಲಿ ನಿರಂತರ ಶ್ರಮಿಸುತ್ತಿವೆ.

### ಭಾ.ಕೃ.ಅನು.ಪ – ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್), ಹೆಸರಘಟ್ಟ, ಬೆಂಗಳೂರು. ಈ ಕೆಳಕಂಡ ಧ್ಯೇಯೋದ್ದೇಶಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದೆ

- ❖ ತೋಟಗಾರಿಕೆ ಕ್ಷೇತ್ರದಲ್ಲಿನ ಹಣ್ಣು, ತರಕಾರಿ, ಆಲಂಕಾರಿಕ ಹಾಗೂ ಔಷಧಿ ಬೆಳೆಗಳಲ್ಲಿ ಮೂಲ ಸಂಶೋಧನೆಗಳನ್ನು ನಡೆಸಿ ಉತ್ಪಾದಕತೆ ಮಾರ್ಗಗಳನ್ನು ಅಭಿವೃದ್ಧಿಗೊಳಿಸುವುದು.
- ❖ ತೋಟಗಾರಿಕಾ ಕ್ಷೇತ್ರದಲ್ಲಿನ ವೈಜ್ಞಾನಿಕ ಮಾಹಿತಿಯ ಆಗರವಾಗಿ ಕೆಲಸ ನಿರ್ವಹಿಸುವುದು.
- ❖ ತೋಟಗಾರಿಕಾ ಉತ್ಪಾದನೆಯ ಆಧುನಿಕ ತಂತ್ರಜ್ಞಾನಗಳ ತರಬೇತಿಯಲ್ಲಿ ಸೇವೆ ನಿರ್ವಹಿಸುವುದು ಹಾಗೂ,
- ❖ ಮೇಲಿನ ಎಲ್ಲಾ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಗಳೊಂದಿಗೆ ಸಂಯೋಜನಾ ಕಾರ್ಯ ನಿರ್ವಹಿಸುವುದು.

### ರಾಷ್ಟ್ರೀಯ ತೋಟಗಾರಿಕಾ ಮೇಳದ ಕುರಿತು.......

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್), ಹೆಸರಘಟ್ಟ, ಬೆಂಗಳೂರು ಇಲ್ಲಿ ಇದೇ ಮಾರ್ಚ್ 15–17 ರಂದು 3 ದಿನಗಳ "ರಾಷ್ಟ್ರೀಯ ತೋಟಗಾರಿಕಾ ಮೇಳ – 2018" ಹಮ್ಮಿಕೊಳ್ಳಲಾಗಿದೆ. ಇದನ್ನು ಕರ್ನಾಟಕ ಸರ್ಕಾರದ ತೋಟಗಾರಿಕಾ ಇಲಾಖೆಯ ಸಹಯೋಗದಲ್ಲಿ ನಡೆಸಲಾಗುವುದು. ಈ ಮೇಳದಲ್ಲಿ ಭಾರತದಾದ್ಯಂತ ತೋಟಗಾರಿಕಾ ಕ್ಷೇತ್ರದಲ್ಲಿ ನಡೆದಿರುವ ಪ್ರಗತಿಯ ಬಗ್ಗೆ, ಸಂಶೋಧನಾ ತಂತ್ರಜ್ಞಾನಗಳು, ಪರಿಕರಗಳು, ಮಾರುಕಟ್ಟೆ ನಿರ್ವಹಣೆ, ಮಾಹಿತಿ ವರ್ಗಾವಣೆ, ಹವಾಮಾನ ಬದಲಾವಣೆ, ಪೋಷಕಾಂಶಗಳ ಕುರಿತು ಪ್ರಾತ್ಯಕ್ಷಿಕೆಗಳು, ವಸ್ತುಪ್ರದರ್ಶನ, ಸಂವಾದ ಕಾರ್ಯಕ್ರಮಗಳು, ಚರ್ಚೆ, ತಾಕುಗಳ ಭೇಟಿ, ಯಶಸ್ವೀ ಕೃಷಿಕರ ಅನುಭವಗಳೊಂದಿಗೆ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

### ತೋಟಗಾರಿಕಾ ಮೇಳ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ

- ರಾಷ್ಟ್ರಮಟ್ಟದಲ್ಲಿ ನಡೆದಿರುವ ತೋಟಗಾರಿಕಾ ಕ್ಷೇತ್ರದಲ್ಲಿನ ಪ್ರಗತಿ ಹಾಗು ಸಂಬಂಧಿಸಿದ ಅಭಿವೃದ್ಧಿ ಇಲಾಖೆಗಳ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ.
- ಒಂದೇ ವೇದಿಕೆಯಲ್ಲಿ ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಅಡಿಯಲ್ಲಿ ಬರುವ ಸಂಸ್ಥೆಗಳು, ರಾಜ್ಯಗಳ ಕೃಷಿ/ತೋಟಗಾರಿಕಾ ವಿಶ್ವವಿದ್ಯಾನಿಲಯಗಳು, ಇಲಾಖೆಗಳು, ಖಾಸಗಿ ವಲಯದ ಸಂಸ್ಥೆ ಹಾಗೂ ಕಂಪನಿಗಳು, ಮಾರುಕಟ್ಟೆ ಹಾಗೂ ವಿಮಾಯೋಜನೆಯ ಸಂಸ್ಥೆಗಳು, ರೈತರ ಉತ್ಪಾದಕ ಕಂಪೆನಿಗಳು, ಸಾರ್ವಜನಿಕ ವಲಯದ ತೋಟಗಾರಿಕಾ ಸೇವೆಯ ಸಂಘ–ಸಂಸ್ಥೆಗಳು, ಕೆ.ವಿ.ಕೆ ಗಳು ಹಾಗೂ ಪ್ರಗತಿಪರ ಕೃಷಿಕರನ್ನು ಒಗ್ಗೂಡಿಸುವುದು.
- ವಿವಿಧ ತೋಟಗಾರಿಕಾ ಪ್ರಗತಿಯ ಮಾಹಿತಿಗಾಗಿ ಕೃಷಿಕರು–ವಿಜ್ಞಾನಿಗಳು–ಸಂಬಂಧಿಸಿದವರೊಂದಿಗೆ ನಿರಂತರ ಸಂವಾದಗಳು.
- ವಿಶೇಷ ತೋಟಗಾರಿಕಾ **ವಸ್ತು ಪ್ರದರ್ಶನ**ದಲ್ಲಿ ಎಲ್ಲಾ ವಲಯಗಳ ಸಂಶೋಧನೆ, ಪರಿಕರ, ತಂತ್ರಜ್ಞಾನಗಳು, ಉತ್ಪನ್ನಗಳು ಸೇರಿರುತ್ತವೆ.
- **ಗ್ರಾಮೀಣ ಉದ್ಯಮಶೀಲತೆಯ ಉತ್ತೇಜನಕ್ಕಾಗಿ ತೋಟಗಾರಿಕೆ** ಎಂಬ ಧ್ಯೇಯ ವಾಕ್ಯದಲ್ಲಿ ವಿವಿಧ ವಿಷಯಗಳಲ್ಲಿ ವಿಶೇಷ ವಿಚಾರ ಸಂಕಿರಣಗಳು ಜರುಗಲಿವೆ.
- ಐ.ಐ.ಹೆಚ್.ಆರ್ ಗೆ ಸಂಬಂಧಿಸಿದ ಏಟಿಕ್ ಪ್ರಕಟಣೆಗಳು, ಉತ್ಪನ್ನಗಳು ಹಾಗೂ ವಿವಿಧ ಸಂಸ್ಥೆಗಳ ಪರಿಕರಗಳ ಪ್ರದರ್ಶನ ಹಾಗು ಮಾರಾಟ

### ಮೇಳದಲ್ಲಿನ ವಿವಿಧ ಅಂಶಗಳು

- **ಹಣ್ಣಿನ ಬೆಳೆಗಳು**
- **ತರಕಾರಿ ಬೆಳೆಗಳು**
- **ಆಲಂಕಾರಿಕಾ ಹಾಗೂ ಔಷಧಿ ಸಸ್ಯಗಳು**
- **ಪ್ಲಾಂಟೇಷನ್ ಬೆಳೆಗಳು**
- **ಸಾಂಬಾರ ಬೆಳೆಗಳು**
- **ಅಣಬೆ**
- **ಗೆಡ್ಡೆಗೆಣಸು ಬೆಳೆಗಳು**
- **ಸಸ್ಯ ಕ್ಷೇತ್ರ/ನರ್ಸರಿಗಳು**
- **ಜೇನು ಸಾಕಾಣಿಕೆ**
- **ಕೊಯ್ಲೋಯತ್ತರ ತಂತ್ರಜ್ಞಾನ, ಕೃಷಿ ಇಂಜಿನಿಯರಿಂಗ್ ಹಾಗೂ ಮೌಲ್ಯವರ್ಧನೆ**

### ವಸ್ತು ಪ್ರದರ್ಶನದ ಆಕರ್ಷಣೆ ಮತ್ತು ಮಾರಾಟ ವ್ಯವಸ್ಥೆ

- ಬೀಜ ಮತ್ತು ನರ್ಸರಿ ಸಸ್ಯಗಳು
- ಏಟಿಕ್ ಸೌಲಭ್ಯಗಳು ಮತ್ತು ಉತ್ಪನ್ನಗಳು
- ನೀರಾವರಿ ವಿಧಾನಗಳು
- ಆಹಾರ ಸಂಸ್ಕರಣೆ ಮತ್ತು ಪ್ಯಾಕಿಂಗ್
- ಪಾಲಿಹೌಸ್, ನೆರಳು ಮನೆ ಒಳಗೊಂಡ ನಿಖರ ಕೃಷಿ ವಿಧಾನಗಳು
- ಆಲಂಕಾರಿಕ ಮತ್ತು ಔಷಧಿ ಬೆಳೆಗಳು
- ಸಾವಯವ ಕೃಷಿ ಹಾಗೂ ಸಮಗ್ರ ಬೇಸಾಯ ಪದ್ಧತಿಗಳು
- ತೋಟಗಾರಿಕಾ ಉತ್ಪನ್ನಗಳ ರಫ್ತು ಸೇವೆಗಳು
- ತೋಟಗಾರಿಕಾ ರಂಗದ ಸಂಶೋಧನೆಗಳು ಹಾಗೂ ಪ್ರಗತಿ
- ಮಾರುಕಟ್ಟೆ ಸೇವೆಯಲ್ಲಿ ತೊಡಗಿರುವವರು
- ಸಸ್ಯ ಪೋಷಕಾಂಶಗಳು ಮತ್ತು ಸಸ್ಯ ಪ್ರಚೋದಕಗಳು
- ಸಸ್ಯೌಷಧಿಗಳು ಹಾಗೂ ಕೀಟ–ರೋಗ ನಿವಾರಕಗಳು
- ಅಂಗಾಂಶ ಕೃಷಿ
- ತೋಟಗಾರಿಕಾ ಉಪಕರಣಗಳು ಹಾಗು ತಯಾರಕ ಕಂಪೆನಿಗಳು
- ಆರ್ಥಿಕ ವಲಯದ ಸಂಸ್ಥೆಗಳು
- ಸರ್ಕಾರಿ, ಅರೆ–ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು
- ಸ್ತ್ರೀಶಕ್ತಿ ಹಾಗು ಇತರೆ ಸ್ವ–ಸಹಾಯ ಗುಂಪುಗಳು
- ಬಿ.ಪಿ.ಡಿ ಲೈಸೆನ್ಸ್ದಾರರು ಹಾಗು ತಂತ್ರಜ್ಞಾನ ವ್ಯವಹಾರ ಯೋಜನೆ
- ರೈತಾಸಕ್ತ ಗುಂಪುಗಳು ಹಾಗು ರೈತರ ಉತ್ಪಾದಕ ಕಂಪೆನಿಗಳು
- ಪರಂಪರಾಗತೆ ಸ್ಥಳೀಯ ತಂತ್ರಜ್ಞಾನಗಳು, ಇತರೆ.....

### ವಸ್ತು ಪ್ರದರ್ಶನ ಮಳಿಗೆಗಳು

ವಸ್ತು ಪ್ರದರ್ಶನವು ಸುಮಾರು 100 ಮಳಿಗೆಗಳನ್ನು ಒಳಗೊಂಡಿದ್ದು 10 ಅಡಿ x 10 ಅಡಿ ಅಳತೆಯ ಹೈ–ಟೆಕ್ ಸುಸಜ್ಜಿತವಾಗಿರುತ್ತವೆ. ಪ್ರತಿ ಮಳಿಗೆಗೆ ರೂ 15,000/– ಶುಲ್ಕವಿರುತ್ತದೆ. ಭಾಗವಹಿಸಲಿಚ್ಚಿಸುವವರು ನಿಗದಿತ ಅರ್ಜಿಯೊಂದಿಗೆ ಲಗತ್ತಿಸಿದೆ) ಹಣವನ್ನು ಮುಂಗಡವಾಗಿ ಪಾವತಿಸಿ, **ಫೆಬ್ರವರಿ 20, 2018**ರ ಒಳಗೆ ಕಾಯ್ದಿರಿಸಬಹುದಾಗಿದೆ. ಮಳಿಗೆಗಳಿಗಾಗಿ **ಡಾ. ಟಿ.ಎಸ್. ಅಘೋರಾ,** ಪ್ರಧಾನ ವಿಜ್ಞಾನಿ, ತರಕಾರಿ ಬೆಳೆಗಳ ವಿಭಾಗ, ಐ.ಸಿ.ಎ.ಆರ್ – ಐ.ಐ.ಎಚ್.ಆರ್ ಸಂಸ್ಥೆ, ಹೆಸರಘಟ್ಟ, ಬೆಂಗಳೂರು–560089. ಮಿಂಚಂಚೆ–aghor@iihr.res.in ದೂ. 91–9986100079, ಇವರನ್ನು ಸಂಪರ್ಕಿಸಬಹುದಾಗಿದೆ.

### ಪ್ರಾಯೋಜಕತ್ವ

ಈ ರಾಷ್ಟ್ರೀಯ ತೋಟಗಾರಿಕಾ ಮೇಳದ ಪ್ರಾಯೋಜಕತ್ವಕ್ಕಾಗಿ ಪ್ರತಿನಿಧಿಗಳು, ಸರ್ಕಾರಿ–ಇಲಾಖೆ ಮತ್ತು ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಕಂಪೆನಿ ಹಾಗು ಇತರರಿಂದ ಕೆಳಕಂಡ ವಿಭಾಗಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

**ಪ್ಲಾಟಿನಂ : 3 ಲಕ್ಷ ರೂಪಾಯಿಗಳು**
**ಗೋಲ್ಡನ್ : 2 ಲಕ್ಷ ರೂಪಾಯಿಗಳ**
**ರಜತ : 1 ಲಕ್ಷ ರೂಪಾಯಿಗಳು**

ರಾಷ್ಟ್ರೀಯ ತೋಟಗಾರಿಕಾ ಮೇಳ-2018